ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	763
ಮಾನ್ಯ ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	17.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಎಷ್ಟು ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ಹಾಗೂ ಮೆಟ್ರಿಕ್ ನಂತರ ಬಾಲಕ/ಬಾಲಕಿಯವರ ವಸತಿ ನಿಲಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ರಾಜ್ಯದಲ್ಲಿ 1300 ಮೆಟ್ರಿಕ್-ಪೂರ್ವ(ಬಾಲಕ-1011, ಬಾಲಕಿ-289) ಮತ್ತು 1138 ಮೆಟ್ರಿಕ್-ನಂತರದ (ಬಾಲಕ- 507, ಬಾಲಕಿ-631) ಹೀಗೆ ಒಟ್ಟು 2438 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಇವುಗಳಿಗೆ ಸಮರ್ಪಕವಾದ ಅಗತ್ಯ ಮೂಲಭೂತ ಸೌಕರ್ಯಗಳಾದ ಆಹಾರ, ಸ್ಥಳದ ಅವಕಾಶ ನೀರಿನ ಸೌಕರ್ಯ, ವಿದ್ಯುತ್ ಸೌಲಭ್ಯ, ಲೈಬ್ರರಿ ವ್ಯವಸ್ಥೆ ಇತ್ಯಾಧಿ ಸೌಕರ್ಯಗಳನ್ನು ಒದಗಿಸಲಾಗಿದೆಯೇ:	ಹೌದು 1. ಆಹಾರ ವೆಚ್ಚದ ದರಗಳನ್ನು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ರೂ.1400/- ರಿಂದ ರೂ.1500/- ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ.1500/- ರಿಂದ ರೂ.1600/- ಕ್ಕೆ ಹೆಚ್ಚಿಸಲಾಗಿದೆ. 2. ಶುದ್ಧ ಕುಡಿಯುವ ನೀರು ಘಟಕ ಸ್ಥಾಪನೆ, ವಿದ್ಯುತ್ ಸೌಲಭ್ಯ, ಗ್ರಂಥಾಲಯ ಸೌಕರ್ಯ, ಕಂಪ್ಯೂಟರ್, ಹಾಸಿಗೆ-ಹೊದಿಕೆ ಇತ್ಯಾಧಿಗಳನ್ನು ಹಂತ ಹಂತವಾಗಿ ಅನುದಾನ ಲಭ್ಯತೆಗನುಗುಣವಾಗಿ ಒದಗಿಸಲಾಗುತ್ತಿದೆ.
ಇ)	ಇಲ್ಲದಿದ್ದಲ್ಲಿ, ಈ ಸೌಲಭ್ಯಗಳನ್ನು ಒದಗಿಸಲು ಯಾವ ರೀತಿ ಕ್ರಮವಹಿಸಲಾಗವುದು ?	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಕಂಪ್ಯೂಟರ್, ದೂರವಾಣಿ, ಇಂಟರ್ ನೆಟ್, ವೆಬ್ ಕ್ಯಾಮಾರಾ, ಸೋಲಾರ್ ಲೈಟ್, ಟಿ.ವಿ. ಸೋಲಾರ್ ವಾಟರ್ ಹೀಟರ್, ಶುದ್ದ ಕುಡಿಯುವ ನೀರಿಗಾಗಿ ವಾಟರ್ ಪ್ಯೂರಿಫೈಯರ್ ಹಾಗೂ ಗ್ರಂಥಾಲಯ ಹಾಗೂ ಇನ್ನಿತರೆ ಮೂಲಭೂತ ಸೌಲಭ್ಯವನ್ನು ಒದಗಿಸಲಾಗಿದ್ದು, ಅನುದಾನದ ವಿವರಗಳು ಈ ಕೆಳಕಂಡಂತಿದೆ

ಕ್ರ.ಸಂ	ವರ್ಷ	ಅನುದಾನ (ರೂ.ಕೋಟಿಗಳಲ್ಲಿ)
1	2014-15	20.00
2	2015-16	22.15
3	2016-17	35.56
4	2017-18	10.00

ಸಂ: ಹಿಂವಕ 1264 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.